# ಸ್ಕಾಟ್ಲೆಂಡಿನಲ್ಲಿ ಮಾಟ ಮಂತ್ರ!

**ಎಡಿನ್‌ಬರೋ ತುಂಬೆಲ್ಲಾ ನಡೆದಾಡುವ ಟೂರ್‌ಗಳು ಇವೆ. ಎಡಿನ್‌ಬರೋ ನಗರವನ್ನು ಈ ಟೂರ್‌ಗಳಿಗೆಂದೇ ಕಟ್ಟಿದ್ದಾರೇನೋ ಎಂಬಂತೆ ಕ್ಯಾಸಲ್‌ಕೋಟೆಯ ಸುತ್ತಮುತ್ತ ಕಿರಿದಾದ, ವಾಹನಗಳು ಬರಲಾಗದ, ಸಣ್ಣ ಸಣ್ಣ ಕಲ್ಲುಗಳಿಂದ ಮಾಡಿದ ದಾರಿಗಳು. ಪ್ರತಿಯೊಂದು ದಾರಿಯ ಹೆಸರೂ ರಾಜನದೋ, ರಾಣಿಯದೋ ಇಲ್ಲವೆ ಅವರ ಮಕ್ಕಳು, ಮನೆನಾಯಿ ಇತ್ಯಾದಿಗಳದ್ದು.**

■ ಚಿತ್ರ-ಲೇಖನ: ಡಾ.ಕೆ.ಎಸ್.ಪವಿತ್ರ

ಎಡಿನ್‌ಬರೋಗೆ ಹೋದಾಗ ಏನೇನು ನೋಡಬೇಕು? ಅಂತರ್ಜಾಲ ತಾಣಗಳನ್ನೆಲ್ಲಾ ಜಾಲಾಡಿ ಮಾಹಿತಿ ಶೇಖರಿಸಿದ್ದೆವು. ಆಗ ನನ್ನ ಗಮನ ಸೆಳೆದದ್ದು 'ವಿಚರಿ ಟೂರ್' ಎಂಬ ಶೀರ್ಷಿಕೆಯಡಿ ವಿಚಿತ್ರ ವಿವರಗಳಿದ್ದ ಜಾಹೀರಾತು. ಸ್ಕಾಟ್ಲೆಂಡಿಗೆ ಈಗಾಗಲೇ ಹೋಗಿ ಬಂದ ಯಾರನ್ನು ಕೇಳಿದರೂ ಇದರ ಬಗ್ಗೆ ಯಾರಿಗೂ ಗೊತ್ತೇ ಇಲ್ಲ! ಒಬ್ಬರಂತೂ 'ಅಯ್ಯೋ ನೀವು ಸೈಕಿಯಾಟ್ರಿಸ್ಟ್ ಆಗಿ ಮಾಟಮಂತ್ರ ಎಲ್ಲಾ ನಂಬ್ತೀರೇನ್ರೀ!' ಎನ್ನಬೇಕೆ?! 'ಅಯ್ಯೋ ನಾನೇನು ಮಾಟಮಂತ್ರ ಕಲಿಯೋದಿಕ್ಕೆ ಹೋಗ್ತೀನೆ? ಮನರಂಜನೆಗೆ, ಚರಿತ್ರೆ ತಿಳಿಯೋದಕ್ಕೆ 'ವಿಚರಿ' ಟೂರ್ ಚೆನ್ನಾಗಿರುತ್ತೆ ಅಂತ ಬರೆದಿದ್ದಾರೆ ನೋಡೋಣ' ಎಂದಿದ್ದೆ.

ಪುರಾತನವಾದ ಎಡಿನ್‌ಬರೋ ಕೋಟೆ ಎಡಿನ್‌ಬರೋ ನಗರದ ಯಾವ ಮೂಲೆಗೆ ಹೋದರೂ ಕಾಣುವಂತಿದೆ. ಸುಮಾರು 2ನೇ ಶತಮಾನದಿಂದ ಇಲ್ಲಿ ರಾಜ-ರಾಣಿಯರ ವಾಸ. ಒಟ್ಟು 26 ಬಾರಿ ಈ ಕೋಟೆ ದಾಳಿಗೀಡಾಗಿತ್ತು. ಬ್ರಿಟನ್ ಅಷ್ಟೇ ಅಲ್ಲ, ಇಡೀ ಜಗತ್ತಿನಲ್ಲಿಯೇ ಇಷ್ಟು ಬಾರಿ ದಾಳಿಗೀಡಾದ ಕೋಟೆಗಳು ಬಹಳ ಕಡಿಮೆ. ಎಡಿನ್‌ಬರೋ ಕೋಟೆಯ 'ಕ್ಯಾಸಲ್‌ಹಿಲ್' ಕೋಟೆಯಿರುವ ಎತ್ತರದ ಬೆಟ್ಟ.

16ನೇ ಶತಮಾನದಲ್ಲಿ ಮಾಟಗಾತಿಯರನ್ನು ನೂರಾರು ಸಂಖ್ಯೆಯಲ್ಲಿ ಇಲ್ಲಿ ಸುಟ್ಟಿದ್ದರಂತೆ. ಇವುಗಳನ್ನು 'Great Scottish witch hunt' ಎಂದೇ ಕರೆಯುತ್ತಾರೆ. ಸ್ಕಾಟ್ಲೆಂಡಿನ ರಾಜನಂತೂ ಈ 'ಮಾಟ ಮಂತ್ರ, ಮಾಟಗಾತಿ' ಯರ ಬಗ್ಗೆ ಒಂದು ಪುಸ್ತಕವನ್ನೇ ಬರೆದುಬಿಟ್ಟ! ಇದರ ಪ್ರಕಾರ ಒಬ್ಬಳು ಮಾಟಗಾತಿ ಜೇನೆಟ್ ವಿಶಾರ್ತ್ ಮಂತ್ರ ಹಾಕಿ ತನ್ನ ವಿರೋಧಿಗಳು ಬೆವರುವಂತೆ, ನಡಗುವಂತೆ ಮಾಡುತ್ತಿದ್ದಳಂತೆ. ಉರಿಯುತ್ತಿರುವ ಕಲ್ಲಿದ್ದಲು ಎಸೆದು ಬಿರುಗಾಳಿ ಎಬ್ಬಿಸುತ್ತಿದ್ದಳಂತೆ. ಬೆಕ್ಕುಗಳನ್ನು ಉಪಯೋಗಿಸಿ, ದುಃಸ್ವಪ್ನ ತರಿಸಿ, ನಿದ್ದೆ ಕೆಡಿಸುತ್ತಿದ್ದಳಂತೆ. ಜೇನೆಟ್ ವಿಶಾರ್ತ್‌ಳನ್ನು ಇನ್ನೊಬ್ಬ ಮಾಟಗಾತಿಯ ಜೊತೆ ಸೇರಿಸಿ ಸುಟ್ಟು ಹಾಕಿದರು ಎನ್ನುವುದು ಇತಿಹಾಸ ಹೇಳುವ ಕಥೆ. 16ನೇ ಶತಮಾನದ ಮಧ್ಯದ ವೇಳೆಗೆ ಈ ಮಾಟಗಾತಿಯರನ್ನೆಲ್ಲಾ ಎಡಿನ್‌ಬರೋ ಕೋಟೆಯಲ್ಲಿ ಸುಟ್ಟು ಹಾಕಲಾಯಿತಂತೆ.

ಮಾಟಗಾತಿಯರ, ಎಡಿನ್‌ಬರೋದ ಈ ಎಲ್ಲಾ ಇತಿಹಾಸವನ್ನೇ, ತುಣುಕು ತುಣುಕು (ದಂತಕತೆಯೋ, ಸತ್ಯಕತೆಯೋ ಗೊತ್ತಿಲ್ಲ) ಕತೆಗಳನ್ನು ಬಂಡವಾಳ ಮಾಡಿಕೊಂಡು ರೂಪಿಸಲ್ಪಟ್ಟಿರುವುದು 'ವಿಚರಿ ಟೂರ್'(witchery tour.) ಇದೊಂದು ನಡೆದಾಡುವ ಟೂರ್. ಎಡಿನ್‌ಬರೋ ತುಂಬೆಲ್ಲಾ ನಡೆದಾಡುವ ಟೂರ್‌ಗಳು ಇವೆ. ಎಡಿನ್‌ಬರೋ ನಗರವನ್ನು ಈ ಟೂರ್‌ಗಳಿಗೆಂದೇ ಕಟ್ಟಿದ್ದಾರೇನೋ ಎಂಬಂತೆ ಕ್ಯಾಸಲ್‌ಕೋಟೆಯ ಸುತ್ತಮುತ್ತ ಕಿರಿದಾದ, ವಾಹನಗಳು ಬರಲಾಗದ, ಸಣ್ಣ ಸಣ್ಣ ಕಲ್ಲುಗಳಿಂದ ಮಾಡಿದ ದಾರಿಗಳು. ಪ್ರತಿಯೊಂದು ದಾರಿಯ ಹೆಸರೂ ರಾಜನದೋ, ರಾಣಿಯದೋ ಇಲ್ಲವೆ ಅವರ ಮಕ್ಕಳು, ಮನೆ ನಾಯಿ ಇತ್ಯಾದಿಗಳದ್ದು.

ಮುಸ್ಸಂಜೆ, ರಾತ್ರಿಯ ವೇಳೆಗೆ ಅಂಗಡಿಗಳೆಲ್ಲಾ ಮುಚ್ಚುತ್ತವೆ. ಸುತ್ತಮುತ್ತಲಿನ ಸಂಗ್ರಹಾಲಯಗಳು ಆರ್ಟ್ ಗ್ಯಾಲರಿಗಳು ಬಾಗಿಲು ಹಾಕುತ್ತವೆ. ಕೋಟೆಯ ಸುತ್ತ ಮೌನದ ವಾತಾವರಣ, ಎಡಿನ್‌ಬರೋದ ಒದ್ದೆ ಛಳಿ, ಇವೆಲ್ಲ ಸೇರಿ ಸೃಷ್ಟಿಸುವ ವಾತಾವರಣ 'ವಿಚರಿ ಟೂರ್'ಗೆ ಹೇಳಿ ಮಾಡಿಸಿರುವಂಥದ್ದು! ಒಬ್ಬರೇ ಏನಾದರೂ ಈ ದಾರಿಯಲ್ಲಿ ನಡೆದರೆ ಭೂತ ಬರದಿದ್ದರೂ, ಭೂತ ಬಂದೀತೆಂಬ ಭಯವಂತೂ ಎಂಥ ಧೈರ್ಯವಂತರಿಗೂ

